# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 6 ಮುನೋಮು 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 23.04.2014.

## ತಿದ್ದೋಲೆ

ಕಂದಾಯ ಇಲಾಖೆ ಸುತ್ತೋಲೆ ಸಂಖ್ಯೆ:ಕಂಇ 344 ಮುನೋಮು 2008, ಬೆಂಗಳೂರು, ದಿನಾಂಕ:06/04/2009 ರಲ್ಲಿ,

i) ಅನುಬಂಧ-I ರ ಕಂಡಿಕೆ 'ಎ' ರಲ್ಲಿನ ಕ್ರಮ ಸಂಖ್ಯೆ 3ನ್ನು ಹಾಗೂ ಅನುಬಂಧ –V ರಲ್ಲಿನ ಕ್ರಮ ಸಂಖ್ಯೆ 3ನ್ನು ಈ ಕೆಳಕಂಡಂತೆ ಮಾರ್ಪಡಿಸಿ ಓದಿಕೊಳ್ಳತಕ್ಕದ್ದು,,

" 3) ಗ್ರಾಮಪಂಚಾಯತಿ ಸಕ್ಷಮ ಪ್ರಾಧಿಕಾರಿಯಿಂದ ಡಿಜಿಟಲ್ ಸಹಿ ಮಾಡಿ ನೀಡಲ್ಪಟ್ಟಿರುವ, ಸ್ವತ್ತಿನ ಖಾತೆ ಮತ್ತು ಅಸೆಸ್ಮೆಂಟ್ ವಹಿಯ ಗಣಕೀಕೃತ ನಮೂನೆ 9 ಮತ್ತು 11 ಎ ಅಥವಾ ಸ್ವತ್ತಿನ ಗಣಕೀಕೃತ ನಮೂನೆ 11ಬಿ,

ii) ಅನುಬಂಧ- I 'ಎ' ರಲ್ಲಿನ ಕ್ರಮ ಸಂಖ್ಯೆ 4 ರಲ್ಲಿ ಮತ್ತು ಅನುಬಂಧ- V ರಲ್ಲಿನ ಕ್ರಮ ಸಂಖ್ಯೆ 4 ರಲ್ಲಿ ನಮೂನೆ " 9 ಮತ್ತು 11 " ನ್ನು, " 9 ಮತ್ತು 11-ಎ" ಎಂಬುದಾಗಿ ಮಾರ್ಪಡಿಸಿ ಓದಿಕೊಳ್ಳತಕ್ಕದ್ದು,

iii) ಅನುಬಂಧ-I (ಸಿ) ರಲ್ಲಿನ ಕ್ರಮ ಸಂಖ್ಯೆ 3ನ್ನು ಈ ಕೆಳಕಂಡಂತೆ ಮಾರ್ಪಡಿಸಿ ಓದಿಕೊಳ್ಳತಕ್ಕದ್ದು,

" 3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಕ್ಷಮ ಪ್ರಾಧಿಕಾರಿಗಳಿಂದ ನೀಡಲ್ಪಟ್ಟಿರುವ ಖಾತಾ 'ಎ' ಮತ್ತು ತೆರಿಗೆ ನಿರ್ಧರಣೆ ವಹಿಯ ಉಧೃತ ಭಾಗ,

**ಅಥವಾ**

31/12/2013 ರ ಹಿಂದಿನ ದಿನಾಂಕದಲ್ಲಿ ಸೃಜಿಸಲಾದ ಬಿ ಖಾತಾ ಮತ್ತು 31/12/2013 ದಿನಾಂಕಕ್ಕಿಂತ ಹಿಂದಿನ ಅವಧಿಯಲ್ಲಿ ಒಂದು ಅಥವಾ ಹೆಚ್ಚಿನ ಖರೀದಿ ಪ್ರಕರಣಗಳು ದಾಖಲಾಗಿದ್ದಲ್ಲಿ ಅವುಗಳ ಪ್ರತಿ

**ಅಥವಾ**

ಸ್ಥಿರಾಸ್ತಿಯು ಕಟ್ಟಡ ಇದ್ದಲ್ಲಿ 31/12/2013 ರ ಹಿಂದಿನ ದಿನಾಂಕದಲ್ಲಿ ಸೃಜಿಸಲ್ಪಟ್ಟ ಖಾತಾ ಬಿ ಮತ್ತು ನೋಂದಾಯಿಸಲ್ಪಡುವ ಆಸ್ತಿಗೆ ಸಂಬಂಧಪಟ್ಟಂತೆ 6-12 ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ಲು ಅಥವಾ ಎಸ್ಕಾಮ್ಸ್ (ESCOMS) ನಿಂದ ನೀಡಲಾಗಿರುವ ವಿದ್ಯುತ್ ಸಂಪರ್ಕ ಹಾಗೂ ಅದರ ಮೇಲಿನ ಲೆಕ್ಕಪತ್ರ ತ:ಖ್ತೆಗಳ ಪ್ರತಿ

2ನೇ ಪುಟಕ್ಕೆ...

3ಎ. ಇತರೆ ಮಹಾನಗರ ಪಾಲಿಕೆ ಸಕ್ಷಮ ಪ್ರಾಧಿಕಾರಿಗಳಿಂದ ನೀಡಲ್ಪಟ್ಟಿರುವ ಖಾತಾ ಮತ್ತು ತೆರಿಗೆ ನಿರ್ಧರಣೆ ವಹಿಯ ಉಧೃತ ಭಾಗ"

iv) ಅನುಬಂಧ-5 ರಲ್ಲಿನ ಕ್ರಮ ಸಂಖ್ಯೆ 7 ನ್ನು ಈ ಕೆಳಕಂಡಂತೆ ಮಾರ್ಪಡಿಸಿ ಓದಿಕೊಳ್ಳತಕ್ಕದ್ದು,

" 7. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಕ್ಷಮ ಪ್ರಾಧಿಕಾರಿಗಳಿಂದ ನೀಡಲ್ಪಟ್ಟಿರುವ ಖಾತಾ 'ಎ' ಮತ್ತು ತೆರಿಗೆ ನಿರ್ಧರಣೆ ವಹಿಯ ಉಧೃತ ಭಾಗ,

**ಅಥವಾ**

31/12/2013 ರ ಹಿಂದಿನ ದಿನಾಂಕದಲ್ಲಿ ಸೃಜಿಸಲಾದ ಬಿ ಖಾತಾ ಮತ್ತು 31/12/2013 ದಿನಾಂಕಕ್ಕಿಂತ ಹಿಂದಿನ ಅವಧಿಯಲ್ಲಿ ಒಂದು ಅಥವಾ ಹೆಚ್ಚಿನ ಖರೀದಿ ಪ್ರಕರಣಗಳು ದಾಖಲಾಗಿದ್ದಲ್ಲಿ ಅವುಗಳ ಪ್ರತಿ

**ಅಥವಾ**

ಸ್ಥಿರಾಸ್ತಿಯು ಕಟ್ಟಡ ಇದ್ದಲ್ಲಿ 31/12/2013 ರ ಹಿಂದಿನ ದಿನಾಂಕದಲ್ಲಿ ಸೃಜಿಸಲ್ಪಟ್ಟ ಖಾತಾ ಬಿ ಮತ್ತು ನೋಂದಾಯಿಸಲ್ಪಡುವ ಆಸ್ತಿಗೆ ಸಂಬಂಧಪಟ್ಟಂತೆ 6-12 ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ಲು ಅಥವಾ ಎಸ್‌ಕಾಮ್ಸ್ (ESCOMS) ನಿಂದ ನೀಡಲಾಗಿರುವ ವಿದ್ಯುತ್ ಸಂಪರ್ಕ ಹಾಗೂ ಅದರ ಮೇಲಿನ ಲೆಕ್ಕಪತ್ರ ತಖ್ತೆಗಳ ಪ್ರತಿ

**ಅಥವಾ**

7ಎ. ಇತರೆ ಮಹಾನಗರ ಪಾಲಿಕೆ ಸಕ್ಷಮ ಪ್ರಾಧಿಕಾರಿಗಳಿಂದ ನೀಡಲ್ಪಟ್ಟಿರುವ ಖಾತಾ ಮತ್ತು ತೆರಿಗೆ ನಿರ್ಧರಣೆ ವಹಿಯ ಉಧೃತ ಭಾಗ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಲ್ಲಿ,

**(ಟಿ.ನಾರಾಯಣಪ್ಪ)**
**ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),**
**ಕಂದಾಯ ಇಲಾಖೆ,**
**(ನೋಂದಣಿ ಮತ್ತು ಮುದ್ರಾಂಕ)**
2/23/4

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 1000 ಪ್ರತಿಗಳನ್ನು ಕಂದಾಯ ಇಲಾಖೆಗೆ ಒದಗಿಸಲು ಕೋರಿದೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿದಾನಸೌದ.

4. ಅಭಿವೃದ್ಧಿ ಆಯುಕ್ತರು ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ.
7. ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ ಕೆ.ಜಿ.ರಸ್ತೆ, ಬೆಂಗಳೂರು.
10. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11. ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು / ಉಪನೋಂದಣಾಧಿಕಾರಿಗಳು (ಐಜಿಆರ್ ರವರ ಮುಖಾಂತರ)
12. ಕಾರ್ಯದರ್ಶಿಗಳ ಪತ್ರಾಂಕಿತ ಆಪ್ತ ಸಹಾಯಕರು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ).
13. ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಂದಾಯ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.